# ಉಪಾಧ್ಯಾಯರಿಗಾಗಿ ಮಾರ್ಗದರ್ಶಿ ಸೂತ್ರಗಳು

ಸ್ವಾಮಿ ನಿತ್ಯಸ್ಥಾನಂದ

**ಹಿಂದಿನ ಸಂಚಿಕೆಯಲ್ಲಿ**

ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಶಿಕ್ಷಣವು ವ್ಯಕ್ತಿಯೊಬ್ಬನಿಗೆ ವಿಚಾರ ಸ್ವಾತಂತ್ರ್ಯವನ್ನು ನೀಡಿ, ಆತನ ಶೀಲ ನಿರ್ಮಾಣಕ್ಕೆ ಸಹಕಾರಿಯಾಗಬೇಕು. ನೈತಿಕತೆ ಇಲ್ಲದ ಅಪಾರ ಯುವಶಕ್ತಿ ವಿನಾಶಕರ ಶಕ್ತಿಯಾಗಿ ಪರಿಣಮಿಸುವುದು. ಸಾಮಾಜಿಕ ಪ್ರಜ್ಞೆ, ಕಳಕಳಿ, ಸೇವಾ ಮನೋಭಾವ, ನೀತಿಬದ್ಧ ನಡವಳಿಕೆ – ಇವುಗಳು ಶಿಕ್ಷಣದಿಂದ ದೊರೆತಾಗ ಮಾತ್ರ ಅದನ್ನು ನೈಜ ಶಿಕ್ಷಣವೆನ್ನಬಹುದು.

### ಸ್ವದೇಶಾಭಿಮಾನ ಮತ್ತು ಸಾಂಸ್ಕೃತಿಕ ಅರಿವು

ವಿದ್ಯಾರ್ಥಿಗಳಲ್ಲಿ ಸ್ವದೇಶಾಭಿಮಾನವನ್ನು ಜಾಗ್ರತಗೊಳಿಸುವ ಶಿಕ್ಷಣ ನಮಗೆ ಬೇಕೆಂದು ವಿವೇಕಾನಂದರು ಕಳಕಳಿಯಿಂದ ಹೇಳುತ್ತಾರೆ. "ನಿಮಗೆ ಈಗ ದೊರೆಯುತ್ತಿರುವ ಶಿಕ್ಷಣದಲ್ಲಿ ಕೆಲವು ಒಳ್ಳೆಯ ಅಂಶಗಳಿವೆ. ಆದರೆ ಅದರಲ್ಲಿ ಒಂದು ಮಹಾ ಲೋಪವಿದೆ, ಅದು ಒಳ್ಳೆಯ ಅಂಶಗಳನ್ನೂ ನಿಷ್ಕ್ರಿಯಗೊಳಿಸಿದೆ. ಇದು ಪುರುಷಸಿಂಹರನ್ನು ತಯಾರುಮಾಡುವ ವಿದ್ಯಾಭ್ಯಾಸವಲ್ಲ. ಇದು ಕೇವಲ ನಿಷೇಧಮಯ ವಿದ್ಯಾಭ್ಯಾಸ. ನಿಷೇಧಮಯವಾದ ವಿದ್ಯಾಭ್ಯಾಸ ಅಥವಾ ನಿಷೇಧ ಭಾವನೆಯ ಮೇಲೆ ನಿಂತ ಯಾವುದೇ ತರಬೇತಿಯಾಗಲಿ ಮೃತ್ಯುವಿಗಿಂತ ಹಾನಿಕರ. ಮಗುವನ್ನು ಶಾಲೆಗೆ ಕಳಿಸುವರು. ಮೊದಲು ಅದು ಕಲಿಯುವುದೇ ತಂದೆ ಮೂರ್ಖ ಎಂಬುದನ್ನು, ಎರಡನೆಯದು ಅವರ ತಾತ ಹುಚ್ಚನೆನ್ನುವುದು, ಮೂರನೆಯದೇ ಗುರುಗಳೆಲ್ಲ ಆಷಾಢಭೂತಿಗಳು, ನಾಲ್ಕನೆಯದೇ ಪವಿತ್ರ ಶಾಸ್ತ್ರಗಳೆಲ್ಲ ಸುಳ್ಳಿನ ಕಂತೆ ಎನ್ನುವುದು. ಅವನಿಗೆ ಹದಿನಾರು ವರುಷ ತುಂಬುವ ಸಮಯಕ್ಕೆ ಅವನೊಂದು ನಿಷೇಧಗಳ ಕಂತೆಯಾಗಿರುತ್ತಾನೆ." (ಕೃಶ್ರೇಣಿ, ೩:೧೭೩)

ಸ್ವಾಮಿ ವಿವೇಕಾನಂದರ ಪ್ರಕಾರ ಯಾರಿಗೆ ಸ್ವಾಭಿಮಾನವಿರುವುದಿಲ್ಲವೊ, ತಮ್ಮ ದೇಶ ಸಂಸ್ಕೃತಿಗಳ ಬಗ್ಗೆ ಅಭಿಮಾನವಿರುವುದಿಲ್ಲವೊ, ಅವರು ಬೇಗ ನೈತಿಕ ಅಧಃಪತನವನ್ನು ಹೊಂದುತ್ತಾರೆ. ಇಂದಿನ ಅನೈತಿಕತೆ ಭ್ರಷ್ಟಾಚಾರಗಳಿಗೆಲ್ಲ ನಮ್ಮಲ್ಲಿ ದೇಶಾಭಿಮಾನ ಇಲ್ಲದಿರುವುದೇ ಕಾರಣ ಎಂದು ಹೇಳಬಹುದು. ನಮ್ಮ ದೇಶವನ್ನು ಪ್ರೀತಿಸುವುದೆಂದರೆ ನಮ್ಮ ಜನರನ್ನೂ ಸಂಸ್ಕೃತಿಯನ್ನೂ ಧರ್ಮವನ್ನೂ ಪ್ರೀತಿಸುವುದು. ಇಂದಿನ ಕೋಮುಗಲಭೆ, ಹಿಂಸಾಚಾರ, ಭ್ರಷ್ಟಾಚಾರ ಇತ್ಯಾದಿಗಳಿಂದ ನಾವು ನಮ್ಮವರ ಬಗ್ಗೆ ಎಷ್ಟೊಂದು ನಿರ್ದಯಿಗಳು, ಕ್ರೂರಿಗಳು ಎಂಬುದು ಸ್ಪಷ್ಟವಾಗುತ್ತದೆ. ಪಾಶ್ಚಾತ್ಯ ರೀತಿನೀತಿಗಳನ್ನೂ, ಅಲ್ಲಿಯ ಸಂಗೀತ ನೃತ್ಯ ಕಲೆ ಮುಂತಾದವುಗಳನ್ನೂ ಅನುಕರಿಸುವ ಮನೋಭಾವ ನಮಗೆ ನಮ್ಮಲ್ಲಿ ಇರುವ ಕೀಳರಿಮೆಯನ್ನು ಸೂಚಿಸುತ್ತದೆ. ಮತ್ತೆ ಕೀಳರಿಮೆಯೇ ನಮ್ಮ ನೈತಿಕ ಅಧಃಪತನಕ್ಕೆ ಮೂಲ ಕಾರಣ. ಇದರಿಂದ ಧಾರ್ಮಿಕ ಶ್ರದ್ಧೆ ಹೊರಟುಹೋಗುತ್ತದೆ. ಆಂತರಿಕ ದುರ್ಬಲತೆಯಿಂದಾಗಿ ಎಲ್ಲ ಪ್ರಭಾವಗಳಿಗೂ ವ್ಯಕ್ತಿ ತನ್ನನ್ನು ತೆರೆದುಕೊಳ್ಳುತ್ತ ಯಾವ ನೆಲೆಯೂ ಇಲ್ಲದೆ ಅವನ ವ್ಯಕ್ತಿತ್ವ ನುಚ್ಚುನೂರಾಗುತ್ತದೆ. ಅನುಕರಣೆ ಎಂಬುದು ಅತ್ಯಂತ ಅವನತಿಯ ಚಿಹ್ನೆ ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯ ಪಡುತ್ತಾರೆ. ನಾವು ಇತರರಿಂದ ಕಲಿಯುವುದು ಬೇಕಾದಷ್ಟು ಇದೆ, ಇತರರಿಂದ ಕಲಿಯಲು ಒಲ್ಲದವನು ಸತ್ತಂತೆಯೇ; ಆದರೆ ನಾವು ನಮ್ಮದೇ ರೀತಿಯಲ್ಲಿ ಇತರರಿಂದ ಕಲಿಯಬೇಕು, ನಾವು ಇತರರಾಗಬಾರದು – ಇದು ವಿವೇಕಾನಂದರ ಮತ. ಅವರು ಇದಕ್ಕೆ ಬೀಜದ ಉದಾಹರಣೆಯನ್ನು ಕೊಡುತ್ತಾರೆ. ಒಂದು ಬೀಜ ಗಾಳಿ, ನೀರು, ಬೆಳಕು, ಗೊಬ್ಬರ ಎಲ್ಲವನ್ನೂ ಸ್ವೀಕರಿಸುತ್ತದೆ, ಆದರೆ ಅದು ಗಾಳಿ, ನೀರು, ಬೆಳಕು, ಗೊಬ್ಬರ ಯಾವುದೂ ಆಗದೆ ತನ್ನದೇ ಬೆಳವಣಿಗೆಯ ನಿಯಮಕ್ಕೆ ಅನುಸಾರವಾಗಿ ಬೆಳೆದು ಮರವಾಗುತ್ತದೆ.

ಒಂದು ನಿರ್ದಿಷ್ಟ ಸಾಂಸ್ಕೃತಿಕ ಹಿನ್ನೆಲೆ ಇಲ್ಲದಿದ್ದರೆ ಯಾವುದೇ ಜನಾಂಗವೂ ತನ್ನತನವನ್ನು ಉಳಿಸಿಕೊಳ್ಳಲಾರದು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು. ಕೇವಲ ಜ್ಞಾನರಾಶಿಗೆ ಅದನ್ನು ಎದುರಿಸುವ ಶಕ್ತಿ ಇಲ್ಲ. ಜಗತ್ತಿಗೆ ಜ್ಞಾನರಾಶಿಯನ್ನೇ ಕೊಡಬಹುದು. ಆದರೆ ಅದರಿಂದ ಹೆಚ್ಚು ಪ್ರಯೋಜನವಿಲ್ಲ. ಸಂಸ್ಕೃತಿಯು ರಕ್ತದಲ್ಲಿ ಹರಿಯಬೇಕು. ಆಧುನಿಕ ಕಾಲದಲ್ಲಿ ಬೇಕಾದಷ್ಟು ಜ್ಞಾನಸಂಪತ್ತನ್ನು ಪಡೆದ ದೇಶಗಳನ್ನು ನೋಡಿರುವೆವು. ಆದರೆ ಅದರಿಂದ ಏನು ಪ್ರಯೋಜನ? ಅವರು ವ್ಯಾಘ್ರಗಳಂತೆ, ಕಾಡುಜನರಂತೆ ಇರುವರು. ಅವರಲ್ಲಿ ಸಂಸ್ಕೃತಿ ಇಲ್ಲ. ನಾಗರಿಕತೆಯಂತೆ ಅವರ ಜ್ಞಾನ ಕೂಡ ತೋರಿಕೆಗೆ ಮಾತ್ರ, ಅವರನ್ನು ಸ್ವಲ್ಪ ಕರೆದರೆ ಸಾಕು, ಕಾಡುಮನುಷ್ಯ ಕಾಣುತ್ತಾನೆ." (ಕೃತಿಶೇಣಿ, ೩: ೧೬೪) "ಪವಿತ್ರತೆ ಇಲ್ಲದೆ ಅತಿಯಾದ ಜ್ಞಾನ ಮತ್ತು ಅಧಿಕಾರಗಳು ಮನುಷ್ಯರನ್ನು ರಾಕ್ಷಸರನ್ನಾಗಿ ಮಾಡುತ್ತವೆ" ಎಂದು ಅವರು ಇನ್ನೊಂದು ಸಂದರ್ಭದಲ್ಲಿ ಹೇಳುತ್ತಾರೆ.

### ಬ್ರಹ್ಮಚರ್ಯದ ಮಹತ್ವ

ಸ್ವಾಮಿ ವಿವೇಕಾನಂದರ ಶಿಕ್ಷಣಚಿಂತನೆಯಲ್ಲಿ ಬ್ರಹ್ಮಚರ್ಯ ಪ್ರಧಾನ ಸ್ಥಾನವನ್ನು ಪಡೆಯುತ್ತದೆ. ಹಿಂದೂ ಸಂಪ್ರದಾಯದ

ಪ್ರಕಾರ ವಿದ್ಯಾರ್ಥಿ ದೆಸೆಯನ್ನು ಬ್ರಹ್ಮಚರ್ಯಾಶ್ರಮ ಎಂದು ಕರೆಯಲಾಗಿದೆ. ಈ ಆಶ್ರಮದಲ್ಲಿರುವ ವಿದ್ಯಾರ್ಥಿಯು ಲೈಂಗಿಕ ಪ್ರವೃತ್ತಿಯನ್ನು ನಿಗ್ರಹಿಸಬೇಕು. ಇದರಿಂದ ಶಕ್ತಿಸಂಚಯವಾಗುತ್ತದೆ. ಈ ಶಕ್ತಿಯು ಓಜಸ್ಸಾಗಿ ಪರಿವರ್ತನೆಯಾಗಿ ಮೇಧಾನಾಡಿಯೆಂಬ ತೀಕ್ಷ್ಣ ಗ್ರಹಣಶಕ್ತಿಯು ಜಾಗೃತವಾಗುತ್ತದೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಲೈಂಗಿಕ ಶಕ್ತಿಯಾಗಿ ವ್ಯಕ್ತವಾಗುವ ಮಾನವ ಶಕ್ತಿಯನ್ನು ನಿಗ್ರಹಿಸಿದಾಗ ಅದು ಸುಲಭವಾಗಿ ಓಜಸ್ಸಾಗಿ ಪರಿವರ್ತನೆಯಾಗುವುದು. ಪವಿತ್ರ ಜೀವನವನ್ನು ನಡೆಸುವ ಪುರುಷ ಮತ್ತು ಸ್ತ್ರೀಯರು ಮಾತ್ರ ಓಜಸ್ಸನ್ನು ಪಡೆಯುತ್ತಾರೆ, ಅದನ್ನು ಮಿದುಳಿನಲ್ಲಿ ಶೇಖರಿಸುತ್ತಾರೆ. ಆದ್ದರಿಂದಲೇ ಬ್ರಹ್ಮಚರ್ಯವನ್ನು ಶ್ರೇಷ್ಠ ಗುಣವಾಗಿ ಪರಿಗಣಿಸಲಾಗಿದೆ."

ಆಧುನಿಕ ವೈದ್ಯರೂ ಕೂಡ ಬ್ರಹ್ಮಚರ್ಯಪಾಲನೆಗೆ ಒತ್ತು ನೀಡುತ್ತಾರೆ. ಸ್ವಾಮಿ ಯತೀಶ್ವರಾನಂದರು ಶಿಕ್ಷಣದ ಬಗೆಗಿನ ತಮ್ಮ ಲೇಖನದಲ್ಲಿ ಪಾಶ್ಚಾತ್ಯ ವೈದ್ಯರೊಬ್ಬರ ಅಭಿಪ್ರಾಯವನ್ನು ಉದ್ಧರಿಸುತ್ತಾರೆ: "ಗಂಡುಹೆಣ್ಣುಗಳಿಬ್ಬರ ರಕ್ತದ ಅತ್ಯುತ್ತಮ ಭಾಗವು ಸಂತಾನೋತ್ಪತ್ತಿಯ ಅಂಶವಾಗಿ ರೂಪಾಂತರಗೊಳ್ಳುತ್ತದೆ ಎಂಬುದು ವೈದ್ಯಕೀಯ ಶರೀರಶಾಸ್ತ್ರದ ಒಂದು ಸತ್ಯಸಂಗತಿ. ಪವಿತ್ರ ಮತ್ತು ಶಿಸ್ತಿನ ಜೀವನ ನಡೆಸುವವರಲ್ಲಿ ಈ ಅಂಶವು ಹೀರಿಕೊಳ್ಳಲ್ಪಡುತ್ತದೆ. ಅದು ಪುನಃ ರಕ್ತಪರಿಚಲನೆಯೊಡನೆ ಒಂದಾಗಿ ಮಿದುಳು, ನರ ಮತ್ತು ಮಾಂಸಖಂಡಗಳ ಅತಿಸೂಕ್ಷ್ಮ ಭಾಗಗಳಾಗಿ ಪರಿಣಮಿಸುತ್ತದೆ. ಮನುಷ್ಯನ ಈ ಶರೀರಾಂಶವು ಅವನ ಪೂರ್ಣ ವ್ಯವಸ್ಥೆಯೊಡನೆ ಹರಡಿಕೊಂಡು ಅವನನ್ನು ಪೌರುಷವಂತನನ್ನಾಗಿಯೂ ಶಕ್ತಿಶಾಲಿಯಾಗಿಯೂ ಧೈರ್ಯಶಾಲಿಯಾಗಿಯೂ ಮತ್ತು ಸಾಹಸಿಯನ್ನಾಗಿಯೂ ಮಾಡುತ್ತದೆ. ಅದನ್ನು ವ್ಯರ್ಥವಾಗುವಂತೆ ಮಾಡಿದರೆ ವ್ಯಕ್ತಿಯು ಹೆಣ್ಣಿಗನೂ, ದುರ್ಬಲನೂ, ಅನಿರ್ಧಾರಿತನೂ ಆಗುತ್ತಾನೆ; ಬೌದ್ಧಿಕವಾಗಿ ಮತ್ತು ಭೌತಿಕವಾಗಿ ಕ್ಷೀಣಿಸುತ್ತಾನೆ.... ಸಂತಾನೋತ್ಪತ್ತಿಯ ಅಂಗಗಳನ್ನು ನಿಗ್ರಹಿಸುವುದರಿಂದ ದೈಹಿಕ ಹುರುಪು ಜಾಸ್ತಿಯಾಗುತ್ತದೆ ಮತ್ತು ಆಧ್ಯಾತ್ಮಿಕ ಪ್ರಗತಿಯಾಗುತ್ತದೆ."

### ಶ್ರದ್ಧೆಯ ಆವಶ್ಯಕತೆ

ಸ್ವಾಮಿ ವಿವೇಕಾನಂದರು ಹೇಳುವಂತೆ ಬ್ರಹ್ಮಚರ್ಯಪಾಲನೆಯು ವ್ಯಕ್ತಿಯನ್ನು ಶ್ರದ್ಧಾವಂತನನ್ನಾಗಿ ಮಾಡುತ್ತದೆ. ಅವರು ಶ್ರದ್ಧೆಗೆ ಹೆಚ್ಚು ಒತ್ತನ್ನು ನೀಡುತ್ತಿದ್ದರು. ಶಿಕ್ಷಣವು ವಿದ್ಯಾರ್ಥಿಗೆ ಅಪಾರ ಆತ್ಮಶ್ರದ್ಧೆಯನ್ನು ನೀಡಬೇಕು. ಆತ್ಮಶ್ರದ್ಧೆಯೆಂದರೆ ತನ್ನಲ್ಲಿ ಅಪಾರ ಶಕ್ತಿಯಿದೆ, ತಾನೇನ್ನಾದರೂ ಸಾಧಿಸಬಲ್ಲೆ ಎಂಬ ಆತ್ಮವಿಶ್ವಾಸ. ವಿವೇಕಾನಂದರು ಹೇಳುತ್ತಾರೆ: "ಮಾನವ ಇತಿಹಾಸದಲ್ಲೆಲ್ಲ ಪ್ರಖ್ಯಾತರಾದ ಸ್ತ್ರೀಪುರುಷರ ಜೀವನದಲ್ಲಿ, ಎಲ್ಲ ಕ್ರಿಯೋತ್ತೇಜಕ ಶಕ್ತಿಗಿಂತಲೂ ಯಾವುದಾದರೊಂದು ಅತಿ ಪ್ರಾಮುಖ್ಯವಾಗಿದ್ದರೆ, ಅದು ಅವರ ಶಕ್ತಿಯಲ್ಲಿ ಅವರಿಗೆ ಇರುವ ಶ್ರದ್ಧೆ. ತಾವು ಪ್ರಖ್ಯಾತರಾಗಬೇಕೆಂಬ ಬಯಕೆಯಿಂದ ಜನ್ಮತಾಳಿ ಅವರು ಪ್ರಖ್ಯಾತರಾದರು."(ವ್ಯಕ್ತಿತ್ವನಿರ್ಮಾಣ, ಪು. ೬೮)

> ಪ್ರಪಂಚವನ್ನು ಉತ್ತಮ ಸ್ಥಿತಿಗೆ ತೆಗೆದುಕೊಂಡು ಬರಬೇಕಾದರೆ ಮಹಾಶ್ರದ್ಧೆಯೇ ಇರಬೇಕು. ಇದರಲ್ಲಿ ನನಗೆ ಸಂದೇಹವೇ ಇಲ್ಲ.... ಮನುಷ್ಯನಲ್ಲಿರುವುದೆಲ್ಲ ಯಾವ ವಿಜ್ಞಾನಿಗೆ ಗೊತ್ತಿದೆ? ಮಾನವನು ಪ್ರಪಂಚಕ್ಕೆ ಬಂದು ಕೋಟ್ಯಂತರ ವರುಷಗಳಾದುವು...ನಿಮ್ಮ ತೋರಿಕೆಯ ಅವನತಿಯ ಹಿಂದೆ ಎಂತಹ ಸಾಧ್ಯತೆಗಳು ಹುದುಗಿರುವುವೋ ಯಾರಿಗೆ ಗೊತ್ತು? ನಿಮ್ಮಲ್ಲಿ ಏನಿರುವುದೋ ಅದರ ಕಿಂಚಿತ್ ಮಾತ್ರ ನಿಮಗೆ ಗೊತ್ತಿರುವುದು; ನಿಮ್ಮ ಹಿಂದೆ ಅನಂತಶಕ್ತಿಯ ಸಾಗರವಿದೆ, ಧನ್ಯತೆ ಇದೆ. –ಸ್ವಾಮಿ ವಿವೇಕಾನಂದ

ಒಂದು ವಸ್ತುವಿನಲ್ಲಿ ನಮಗೆ ವಿಶ್ವಾಸವಿದ್ದರೆ ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುತ್ತೇವೆ, ಅದು ಹಾಳಾಗದಂತೆ ನೋಡಿಕೊಳ್ಳುತ್ತೇವೆ. ಒಂದು ವಸ್ತುವಿನಲ್ಲಿ ವಿಶ್ವಾಸವೆಂದರೆ ಅದರ ಉಪಯುಕ್ತತೆಯಲ್ಲಿ ನಮಗಿರುವ ವಿಶ್ವಾಸ. ಅದರ ಉಪಯುಕ್ತತೆ ಹಿರಿದಾದಷ್ಟೂ ಅದರಲ್ಲಿ ಹೆಚ್ಚು ವಿಶ್ವಾಸ ನಮಗಿರುತ್ತದೆ. ಎಲ್ಲ ವಸ್ತುಗಳಿಗಿಂತಲೂ ಜ್ಞಾನ ಅತ್ಯಂತ ಹಿರಿದಾದದ್ದು. ಆಹಾರ ಪದಾರ್ಥಕ್ಕಿಂತಲೂ ಆಹಾರವನ್ನು ಉತ್ಪಾದಿಸಲು ಬೇಕಾಗುವ ಜ್ಞಾನ ತುಂಬ ಹಿರಿದಾದುದು. ಹಣಕ್ಕಿಂತಲೂ ಹಣ ಮಾಡುವ ಕೌಶಲ ಹೆಚ್ಚು ಹಿರಿದಾದುದು. ಈ ಜ್ಞಾನ ಮತ್ತು ಕೌಶಲಗಳನ್ನು ಹೊಂದಿರುವವನು ಮತ್ತು ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸುವವನು, ಅಂದರೆ ಮಾನವ, ಎಲ್ಲಕ್ಕಿಂತಲೂ ಹಿರಿದಾಗಿರಬೇಕು. ಹೀಗೆ ವ್ಯಕ್ತಿಯು ತನ್ನ ಮೌಲ್ಯದಲ್ಲಿ, ತನ್ನ ಶಕ್ತಿಯಲ್ಲಿ ವಿಶ್ವಾಸವಿಡಬೇಕು. ಅಂತಹ ಆತ್ಮವಿಶ್ವಾಸ ತನ್ನನ್ನು ತಾನು ಸರಿಯಾಗಿ ಕಾಪಾಡಿಕೊಳ್ಳಲು, ತನ್ನನ್ನು ತಾನು ಸರಿಯಾಗಿ ಉಪಯೋಗಿಸಿಕೊಳ್ಳಲು ಅವನಿಗೆ ಸಹಾಯಕವಾಗುತ್ತದೆ. ಅನೇಕರು ಎಲ್ಲವನ್ನೂ ಚೆನ್ನಾಗಿ ಬಳಸಿಕೊಂಡು ತಮ್ಮನ್ನು ಮಾತ್ರ ಹಾಳುಮಾಡಿಕೊಳ್ಳುತ್ತಾರೆ. ಎಲ್ಲವನ್ನೂ ಉಪಯೋಗಿಸಿಕೊಂಡು ತಾವು ಮಾತ್ರ, ಅನುಪಯುಕ್ತ ಮಾತ್ರವಲ್ಲ, ದುರುಪಯುಕ್ತ ಜೀವನ ನಡೆಸುತ್ತಾರೆ. ಒಬ್ಬ ವ್ಯಕ್ತಿಗೆ ತನ್ನ ನಿಜವಾದ ಮೌಲ್ಯದಲ್ಲಿ ವಿಶ್ವಾಸವಿದ್ದರೆ ಅವನು ಇಂತಹ ಜೀವನ ನಡೆಸುವುದೇ ಇಲ್ಲ. ತನ್ನ ಅಂತರಂಗದ ಒಳ್ಳೆಯತನದಲ್ಲಿ, ಶಕ್ತಿಸಾಮರ್ಥ್ಯಗಳಲ್ಲಿ, ಪಾವಿತ್ರ್ಯದಲ್ಲಿ ಮತ್ತು ದಿವ್ಯತೆಯಲ್ಲಿ ವಿಶ್ವಾಸವುಳ್ಳವನು ಅದಕ್ಕನುಗುಣವಾಗಿಯೇ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಾನೆ, ಎಂದೂ ಕೆಟ್ಟ ಹಾದಿ ಹಿಡಿಯುವುದಿಲ್ಲ. ಆದ್ದರಿಂದಲೇ ವಿವೇಕಾನಂದರು ಹೇಳುತ್ತಾರೆ: "ಆತ್ಮಶ್ರದ್ಧೆಯ ಆದರ್ಶ ನಮಗೆ ಬಹಳ ಸಹಕಾರಿ. ನಮ್ಮಲ್ಲಿ ನಮಗೆ ನಂಬಿಕೆಯನ್ನು ಹೆಚ್ಚು ಬೋಧಿಸಿದ್ದರೆ, ಅದನ್ನು ಅನುಷ್ಠಾನಕ್ಕೆ ತಂದಿದ್ದರೆ, ನಮ್ಮಲ್ಲಿರುವ ಅನೇಕ ದೋಷಗಳು ಮತ್ತು ದುಃಖದ ಬಹುಭಾಗ ಮಾಯವಾಗುತ್ತಿದ್ದವು ಎಂಬುದರಲ್ಲಿ ಸಂದೇಹವಿಲ್ಲ." (ವ್ಯಕ್ತಿತ್ವ ನಿರ್ಮಾಣ, ಪು.೬೮) ✪